# MODEL QUESTION PAPER
# KANNADA-PAPER I

**ಮಾದರಿ ಪ್ರಶ್ನೆ ಪತ್ರಿಕೆ** **ಅಂಕಗಳು:40**

**ತರಗತಿ:VIII** **ಕನ್ನಡ I** **ಸಮಯ:1 ಗಂಟೆ 30 ನಿಮಿಷ**

**ಸೂಚನೆಗಳು:**

- **ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳಲು ನಿಮಗೆ 15 ನಿಮಿಷ ಕಾಲಾವಕಾಶ ನೀಡಲಾಗಿದೆ.**
- **ಎಲ್ಲಾ ಪ್ರಶ್ನೆಗಳನ್ನು ಸಾವಧಾನವಾಗಿ ಓದಿರಿ.**
- **ಸೂಚನೆಗಳನ್ನು ಓದಿ ಅರ್ಥಮಾಡಿಕೊಂಡು ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.**

**1 ರಿಂದ 3 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 2 ಪ್ರಶ್ನೆಗಳಿಗೆ ಉತ್ತರಿಸಿರಿ. 2*1=2**

1.ಆವರಣದಿಂದ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

ಅಸೀಮ ರೂಪಿ ಅಂಬರದಲ್ಲಿ ಮೂಡಿದುದೇನು ?

(ಹೊನ್ನಾರು,ಹಿಂಗಾರು,ಮುಂಗಾರು,ಬಿಸಿಲು)

2.ಪರಿಸರದ ಉಳಿವು ಬಾಳಿನ ಗೆಲುವು ಪಾಠವು ಸಾಹಿತ್ಯದ ಯಾವ ಪ್ರಕಾರಕ್ಕೆ ಸೇರಿದುದಾಗಿದೆ?

(ಕಥೆ,ಕವನ,ಕಥನ ಕವನ,ಗೀತ ನಾಟಕ)

3. ಕೆಳಗಿನ ವಾಕ್ಯದಲ್ಲಿ ಅಡಿಗೆರೆ ಎಳೆದ ಪದದ ತದ್ಭವ ರೂಪ ಬರೆಯಿರಿ.

<u>ಸ್ನೇಹಕ್ಕೆ</u> ಸಮಾನ ಮನೋಧರ್ಮ ಅವಶ್ಯವಾಗಿದೆ .

**4 ರಿಂದ 7 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 3 ಪ್ರಶ್ನೆಗಳಿಗೆ ಉತ್ತರಿಸಿರಿ. 3*2=6**

4. ದುಡುಕಿ ಮತಿದಪ್ಪುವುದು,ತಪ್ಪನೊಪ್ಪೆನ್ನುವುದು

ಬದುಕೆಂಬುದಿದು ತಾನೇ?- ಮಂಕುತಿಮ್ಮ

- ಮಂಕುತಿಮ್ಮನ ಕಗ್ಗದ ಈ ಮೇಲಿನ ಸಾಲುಗಳನ್ನು ವಿಶ್ಲೇಷಿಸಿ ಬರೆಯಿರಿ.

5. 'ಇಸ್ಲಾಮೀಪುರದಲ್ಲೊಂದು ಯಕ್ಷಗಾನ' ಕಥೆಗೆ ಬೇರೊಂದು ಶೀರ್ಷಿಕೆ ನೀಡಿ ಸಮರ್ಥಿಸಿ ಬರೆಯಿರಿ.

6. ಕೆಳಗೆ ನೀಡಲಾದ ಸಾಲಿನಲ್ಲಿ ಅಡಿಗೆರೆ ಎಳೆದ ಭಾಷಾ ಪ್ರಯೋಗವನ್ನು ಬಳಸಿಕೊಂಡು ಸ್ವಂತ ವಾಕ್ಯ ರಚಿಸಿರಿ.

ಈ ಕಪಿ ನಮಗೇನಾದರೂ ಹೀಗೆ ಚೇಷ್ಟೆ ಮಾಡಿದರೆ ಸರಿಯಾದ <u>ಗತಿ ತೋರಿಸುತ್ತೇವೆ</u> ಎಂದರು.

7. ಮಾದರಿಯಂತೆ ಉತ್ತರಿಸಿರಿ.

ಹೊಟ್ಟೆಯೊಂದರ - ಹೊಟ್ಟೆ + ಒಂದರ

ಡೊಂಬನುಪಾಯ - —--------------

ಕಾಣುತೊಂದೆ - —--------------------

**8 ರಿಂದ 13 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 5 ಪ್ರಶ್ನೆಗಳಿಗೆ ಉತ್ತರಿಸಿರಿ. 5*4=20**

8. ಮಳೆ ಬಂದಾಗ ಭೂಮಿಯಲ್ಲಾಗುವ ಬದಲಾವಣೆಯ ಕುರಿತು 'ಮುಂಗಾರು ಗೀತೆ' ಕವನದಲ್ಲಿ ಓದಿರುವಿರಿ. ಈ ಹಿನ್ನೆಲೆಯಲ್ಲಿ ಮಳೆಯ ಜೊತೆಗಿನ ನಿಮ್ಮ ಅನುಭವವನ್ನು ವರ್ಣಿಸಿ ಒಂದು ವರ್ಣನ ಟಿಪ್ಪಣಿಯನ್ನು ಬರೆಯಿರಿ.

9. ನನಗೆ ಈ ಸಾಧುವಾದ ಕೋಣ ದೊರಕಿರುವಾಗ,ನಾನು ನಿಮ್ಮ ತಂಟೆಗೆ ಏಕೆ ಬರಲಿ? -ಇದು ಕಾಡುಕೋಣ ಪಾಠದಲ್ಲಿ ಬಂದ ಚೇಷ್ಟೆ ಮಾಡುವ ಕಪಿಯ ಮಾತು. ಇದರ ಆಧಾರದಲ್ಲಿ ಕೋಣವನ್ನು ಗೋಳುಹೊಯ್ಯುತ್ತಿದ್ದ ಕಪಿಯ ತುಂಟಾಟಗಳನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ.

10.'ಮುಂಗಾರು ಗೀತೆ' ಕವನದ ಈ ಕೆಳಗಿನ ಸಾಲುಗಳ ಆಸ್ವಾದನಾ ಟಿಪ್ಪಣಿ ಬರೆಯಿರಿ.

© State Assessment Cell SCERT, Kerala

ಹೊಸನೇಗಿಲ ಮುನ್ನಡೆಯಲ್ಲೊ
ಋತುಮಾನದ ರಂಗಿದೆ
ನವ ಮಾನವ ಮುನ್ನೋಟದಲ್ಲೊ
ಕಾಲಚಕ್ರ ಉರುಳಿದೆ.

11. ಡಿವಿಜಿ ಅವರ ಮಂಕುತಿಮ್ಮನ ಕಗ್ಗದ ಕೆಲವು ಸಾಲುಗಳನ್ನೂ,ಜ. ಹೊ. ನಾರಾಯಣಸ್ವಾಮಿಯವರ 'ಮಾನವರಾಗೋಣ' ಕವನದ ಕೆಲವು ಸಾಲುಗಳನ್ನೂ ಕೆಳಗೆ ನೀಡಲಾಗಿದೆ. ಎರಡೂ ಕವನಗಳ ಆಶಯಗಳನ್ನು ಪರಸ್ಪರ ಹೋಲಿಸಿ, ಹೋಲಿಕಾ ಟಿಪ್ಪಣಿಯನ್ನು ಬರೆಯಿರಿ.

ಒಂದೆ ಗಗನವ ಕಾಣುತೊಂದೆ ನೆಲವನ್ನು ತುಳಿಯು
ತೊಂದೆ ಧಾನ್ಯವನುಣ್ಣುತೊಂದೆ ನೀರ್ಗುಡಿದು
ಒಂದೇ ಗಾಳಿಯನುಸಿರ್ವ  ನರ ಜಾತಿಯೊಳಗೆಂತು
ಬಂದುದೀ ವೈಷಮ್ಯ- ಮಂಕುತಿಮ್ಮ

**<u>ಮಾನವರಾಗೋಣ</u>**

ಮಾನವರಾಗೋಣ ಬನ್ನಿ ಮಾನವರಾಗೋಣ
ಮಾನವರಾಗೋಣ ನಾವು ಮಾನವರಾಗೋಣ
ಭೇದವನರಿಯದು ನೀಲಿಯ ಗಗನ
ಒಂದೇ ಮಣ್ಣಿಂದೆಲ್ಲರ ಜನನ
ಒಂದೇ ದಿಕ್ಕಿನಲೆಲ್ಲರ ಪಯಣ
ನುಡಿಯಲಿ ಮಿಡಿಯಲಿ ಅಂತ:ಕರಣ

12. ಯಕ್ಷಗಾನ ನಡೆಯಬೇಕಾದರೆ ಅದ್ರಾಮ ಭಾಗವತಿಕೆ ಮಾಡಬೇಕು.ಈಗ ಹೊತ್ತಿ ಉರಿಯುವ ಊರು ಅದ್ರಾಮನಿಂದ ಮತ್ತೆ ಒಂದಾಗುತ್ತೆ... ..
ಉಪಕಾರ ಎಲ್ಲಿ ಬಂತು ಸಾಹೇಬರೇ,ಇದು ಮನುಷ್ಯರಾದ ನಾವು ಮಾಡುವ ಕರ್ತವ್ಯ... .
- ಇವು 'ಇಸ್ಲಾಮೀಪುರದಲ್ಲೊಂದು ಯಕ್ಷಗಾನ' ಪಾಠದಲ್ಲಿ ಬಂದ ಶಂಕರನಾರಾಯಣನ ಮಾತುಗಳು. ಇದರ ಆಧಾರದಲ್ಲಿ ಶಂಕರನಾರಾಯಣನ ಪಾತ್ರಚಿತ್ರಣ ಮಾಡಿರಿ.

13.ಪರಸ್ಪರ ಪ್ರೀತಿ,ವಿಶ್ವಾಸವುಳ್ಳ ಸ್ನೇಹಿತರಿಗೆ ಜೀವದ ಗೆಳೆಯರು ಎನ್ನುವರು.ಅಂತಹ ಸ್ನೇಹಿತರ ದೇಹ ಎರಡಿದ್ದರೂ ಮನಸ್ಸು, ಆತ್ಮ ಒಂದೇ ಆಗಿರುತ್ತದೆ.
- 'ಸ್ನೇಹ' ಪಾಠದಲ್ಲಿ ಬರುವ ಮೇಲಿನ ಮಾತುಗಳ ಆಧಾರದಲ್ಲಿ ನಿಮ್ಮ ಆತ್ಮೀಯ ಗೆಳೆಯ ಅಥವಾ ಗೆಳತಿಯರ ಪರಸ್ಪರ ಪ್ರೀತಿ,ಸ್ನೇಹ,ಸಹಕಾರ ಮೊದಲಾದ ವಿಚಾರಗಳನ್ನು ನಿಮ್ಮ ಅನುಭವಗಳೊಂದಿಗೆ ಟಿಪ್ಪಣಿಯ ರೂಪದಲ್ಲಿ ಬರೆಯಿರಿ.

**14 ರಿಂದ 16 ರವರೆಗಿನ  ಪ್ರಶ್ನೆಗಳಲ್ಲಿ  ಯಾವುದಾದರೂ 2 ಪ್ರಶ್ನೆಗಳಿಗೆ ಉತ್ತರಿಸಿರಿ.   2*6=12**

14.ಕಾಡುಕೋಣ ಪಾಠದಲ್ಲಿ ಕೋಣದ ಸಾತ್ವಿಕತೆ ಹಾಗೂ ಕಪಿಯ ಚೇಷ್ಟೆಯ ಕುರಿತು ಓದಿ ತಿಳಿದಿರುವಿರಲ್ಲವೇ ? ಈ  ಕಥೆಯನ್ನು ವಿವರಿಸುತ್ತಾ ನಿಮ್ಮ ಗೆಳೆಯ / ಗೆಳತಿಗೆ ಪತ್ರವೊಂದನ್ನು ಬರೆಯಿರಿ.

© State Assessment Cell SCERT, Kerala

15. ನಿಜವಾದ ಸ್ನೇಹಿತರು ಪರಸ್ಪರ ಏನನ್ನೂ ಬಯಸುವುದಿಲ್ಲ.ದುಃಖದ ಪ್ರಸಂಗ ಬಂದಾಗ,ಆರ್ಥಿಕ ಸಂಕಷ್ಟಗಳು ಒದಗಿದಾಗ ಸಹಾಯ ಮಾಡುವವರೇ ನಿಜವಾದ ಸ್ನೇಹಿತರು.

- 'ಸ್ನೇಹ 'ಪಾಠದಲ್ಲಿ ಬಂದ ಮೇಲಿನ ಮಾತುಗಳ ಆಧಾರದಲ್ಲಿ 'ನಿಸ್ವಾರ್ಥ ಸ್ನೇಹ ಸಂಬಂಧ' ಎಂಬ ವಿಷಯದ ಕುರಿತು ಲಿಖಿತ ಭಾಷಣವೊಂದನ್ನು ತಯಾರಿಸಿರಿ.

16. ಕೋಮು ಗಲಭೆ , ಜಾತಿ ವೈಷಮ್ಯ ಮೊದಲಾದವುಗಳು ಸಮಾಜದ ಸ್ವಾಸ್ಥವನ್ನು ಕೆಡಿಸುತ್ತವೆ ಎಂಬುದನ್ನು 'ಇಸ್ಲಾಮೀಪುರದಲ್ಲೊಂದು ಯಕ್ಷಗಾನ' ಪಾಠದಲ್ಲಿ ಓದಿದ್ದೀರಿ. ಈ ಹಿನ್ನೆಲೆಯಲ್ಲಿ 'ಶಾಂತಿಯುತ ಸಮಾಜಕ್ಕೆ ಸಾಮರಸ್ಯದ ಜೀವನ' ಎಂಬ ವಿಷಯದ ಕುರಿತು ಪ್ರಬಂಧವೊಂದನ್ನು ಬರೆಯಿರಿ.

© State Assesment Cell SCERT , Kerala